ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/17/2015-16. ದಿನಾಂಕ:12-07-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಚಿತ್ತಪ್ಪ ತಂದೆ ಲೇಟ್ ಪೂಜಾರಿ ದೊಡ್ಡಪ್ಪ<br>2)ಗೊಲ್ಲರ ದೊಡ್ಡಪ್ಪ ತಂದೆ ಪೂ.ಹಾಲಪ್ಪ<br>3)ಪೂಜಾರಿ ದೊಡ್ಡಪ್ಪ ತಂದೆ ಪೂ.ದೊಡ್ಡಪ್ಪ<br>4)ಚಿಕ್ಕಪ್ಪ ತಂದೆ ಪೂಜಾರಿ ದೊಡ್ಡಪ್ಪ<br>ಕುದರೆಡವು ಗೊಲ್ಲರಹಟ್ಟಿ ಗ್ರಾಮ<br>ಕೂಡ್ಲಿಗಿ ತಾಲೂಕು | ಪೂಜಾರಿ ಪಾಲಪ್ಪ ತಂದೆ ಪೂಜಾರಿ ದೊಡ್ಡಪ್ಪ<br>ಕುದರೆಡವು ಗೊಲ್ಲರಹಟ್ಟಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ರಾಮದುರ್ಗ ಗ್ರಾಮದ ಸನಂ 205ಸಿ. ವಿಸ್ತೀರ್ಣ 0-28 ಸೆಂಟ್ಸು ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ರಾಮದುರ್ಗ ಗ್ರಾಮದ ಸನಂ 205ಸಿ. ವಿಸ್ತೀರ್ಣ 0-28 ಸೆಂಟ್ಸು ಜಮೀನನ್ನು ಸದರಿ ತಾಲೂಕು ಕುದರೆಡವು ಗೊಲ್ಲರಹಟ್ಟಿ ಗ್ರಾಮದ ಚಿತ್ತಪ್ಪ ತಂದೆ ಲೇಟ್ ಪೂಜಾರಿ ದೊಡ್ಡಪ್ಪ ಇವರು ದಿನಾಂಕ 14-08-2014 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ರಾಮದುರ್ಗ ಇವರು ನಮೂನೆ-21 ನೋಟಿಸನ್ನು ದಿನಾಂಕ 17-12-2014 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಅರ್ಜಿದಾರರ ಸಹೋದರರಾದ ಪೂಜಾರಿ ಪಾಲಪ್ಪ ತಂದೆ ಪೂಜಾರಿ ದೊಡ್ಡಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 19/2014-15. ದಿನಾಂಕ 18-01-2015. ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 08-09-2015 ರಿಂದ 12-07-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ರಾಮದುರ್ಗ ಗ್ರಾಮದ ಸನಂ 205ಸಿ. ವಿಸ್ತೀರ್ಣ 0-28 ಸೆಂಟ್ಸು ಜಮೀನು ನಮ್ಮ ತಂದೆಯವರಾದ ಗೊಲ್ಲರ ದೊಡ್ಡಪ್ಪ ತಂದೆ ಪೂಜಾರಿ ಪಾಲಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇದ್ದು ಇವರು ತಮ್ಮ ಸ್ವ ಇಚ್ಚೇಯಿಂದ ದಿನಾಂಕ 14-08-2014 ರಂದು ನನ್ನ ಹೆಸರಲ್ಲಿ ಪಾಲು ವಿಭಾಗದ ಪತ್ರ ಬರೆಯಿಸಿ ಕೊಟ್ಟಿರುತ್ತಾರೆ. ಕಾರಣ ಸದರಿ ಪಾಲು ವಿಭಾಗದ ಪತ್ರದಂತೆ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನು ನಮ್ಮ ತಂದೆಯವರ ಹೆಸರಲ್ಲಿನಲ್ಲಿದ್ದು ಸದರಿ ಜಮೀನು ನಮ್ಮ ತಂದೆ ತಾಯಿಯವರ ಜೀವನಾಂಶಕ್ಕೆ ಭಾಗ ಇದ್ದು ನಮ್ಮಲ್ಲರಿಗೂ ತಿಳಿಸದೇ ನಮ್ಮ ತಮ್ಮನಾದ ಚಿತ್ತಪ್ಪ ತಂದೆ ಲೇಟ್ ಪೂಜಾರಿ ದೊಡ್ಡಪ್ಪ ಇವರು ಸುಳ್ಳು ದಾಖಲೆಗಳನ್ನು ಮಾಡಿ ಕೊಂಡು ಅರ್ಜಿ ಸಲ್ಲಿಸಿರುತ್ತಾರೆ. ಕಾರಣ ಸದರಿ ಖಾತಾ ಬದಲಾವಣೆಯ ಅರ್ಜಿಯನ್ನು ರದ್ದು ಪಡಿಸಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ಸದರಿ ವಂಶವೃಕ್ಷದಲ್ಲಿ ಒಬ್ಬ ಸದಸ್ಯರನ್ನು ಬಿಟ್ಟು ಅರ್ಜಿ ಸಲ್ಲಿಸಿರುವುದು ಕಂಡು ಬಂದ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ರಾಮದುರ್ಗ ಗ್ರಾಮದ ಸನಂ 205ಸಿ. ವಿಸ್ತೀರ್ಣ 0-28 ಸೆಂಟ್ಸು ಜಮೀನಿನ ವಂಶವೃಕ್ಷದಲ್ಲಿ ಒಬ್ಬ ಸದಸ್ಯರುಗಳ ಹೆಸರನ್ನು ಕೈಬಿಟ್ಟಿರುವ ಕಾರಣ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸುತ್ತಾ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 12-07-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಗುಡೇಕೋಟೆ
ಗುಡೇಕೋಟ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಚಿತ್ತಪ್ಪ ತಂದೆ ಲೇಟ್ ಪೂಜಾರಿ ದೊಡ್ಡಪ್ಪ. ಗೊಲ್ಲರ ದೊಡ್ಡಪ್ಪ ತಂದೆ ಪೂ.ಪಾಲಪ್ಪ. ಹಾಗೂ ಇತರರು ಕುದರೆಡವು ಗೊಲ್ಲರಹಟ್ಟಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಪೂಜಾರಿ ಪಾಲಪ್ಪ ತಂದ ಪೂಜಾರಿ ದೊಡ್ಡಪ್ಪ ಕುದರೆಡವು ಗೊಲ್ಲರಹಟ್ಟಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.